**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ಕೊಪ್ಪ**

**ಸಿ.ಸಿ. ನಂಃ 2/2019**

**ಫಿರ್ಯಾದುದಾರರು** ಃ ಶ್ರೀ. ಜಿ.ಎಸ್. ಮಹಾಬಲ ರಾವ್,
ಮಾಲೀಕರುಃ ಮಹಿಮಾ ಆಗ್ರೋ ಕ್ಲಿನಿಕ್,
ಎಸ್.ವಿ.ಟಿ. ರಸ್ತೆ, ಕೊಪ್ಪ – 577 126.

ಃವಿಃ

**ಆರೋಪಿತರು** ಃ ಶ್ರೀ. ಪ್ರದೀಪ್ ಪಟೇಲ್ ಕೆ.ಆರ್.,
ಮಾಲೀಕರುಃ ಪಟೇಲ್ ಏಜೆನ್ಸಿ,
ಪೆಸ್ಟಿಸೈಡ್ ಡೀಲರ್, ಮುಖ್ಯ ರಸ್ತೆ,
ಬಾಳೆಹೊನ್ನೂರು - 577 112,
ವಾಸಃ ಕೇರಾಫ್. ಸಮದ್ ಸಾಹಿಬ್,
ಸುಧಾ ಆಸ್ಪತ್ರೆ ಹತ್ತಿರ, ಹಲಸೂರು ರಸ್ತೆ,
ಬಾಳೆಹೊನ್ನೂರು ಅಂಚೆ.

- - -

**ಆ ಪಾ ದ ನೆ**

ಆರೋಪಿಯಾದ ನಿಮ್ಮ ವಿರುದ್ಧ ಫಿರ್ಯಾದುದಾರರು ದಾಖಲು ಮಾಡಿರುವ ಫಿರ್ಯಾದು ಏನೆಂದರೆ, ನೀವು ಆರೋಪಿ 1,97,840/- ರೂ.ಗಳ 24.10.2018ನೇ ದಿನಾಂಕವನ್ನು ನಮೂದಿಸಿರುವ, 503281ನೇ ಸಂಖ್ಯೆಯ, ಕೆನರಾ ಬ್ಯಾಂಕ್, ಬಾಳೆಹೊನ್ನೂರು ಶಾಖೆಯ ಒಂದು ಚೆಕ್ಕನ್ನು ಫಿರ್ಯಾದುದಾರರಿಗೆ ಕೊಡಬೇಕಾದ ಹಣದ ಬಾಬ್ತು ನಗದೀಕರಣಕ್ಕಾಗಿ ನೀಡಿದ್ದು, ಫಿರ್ಯಾದುದಾರರು ಅದನ್ನು ಜಮಾವಣೆಗಾಗಿ ಬ್ಯಾಂಕಿನಲ್ಲಿ ಹಾಜರುಪಡಿಸಿದಾಗ, ಬ್ಯಾಂಕಿನವರು ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣವಿಲ್ಲವೆಂಬ ಹಿಂಬರಹದೊಂದಿಗೆ ಅದನ್ನು ವಾಪಾಸು ಮಾಡಿರುತ್ತಾರೆ ಹಾಗೂ ಈ ಬಗ್ಗೆ ನಿಮಗೆ ವಕೀಲರ ಮೂಲಕ ನೋಟೀಸನ್ನು ಕೊಟ್ಟರೂ ಸಹಾ

ನೀವು ಆರೋಪಿ ಚೆಕ್ಕಿನಲ್ಲಿ ಒಳಗೊಂಡ ಹಣವನ್ನು ಮರುಪಾವತಿ ಮಾಡಿರುವುದಿಲ್ಲ, ಆದ್ದರಿಂದ, ನೀವು ಆರೋಪಿ ಫಿರ್ಯಾದುದಾರರಿಗೆ ಮೋಸ ಮಾಡಬೇಕೆನ್ನುವ ಉದ್ದೇಶದಿಂದ ಈ ರೀತಿಯ ಚೆಕ್ಕನ್ನು ನೀಡಿ ವರ್ಗಾವಣೀಯ ಲಿಖಿತ ಕಾಯ್ದೆ ಕಲಂ 138ರ ಪ್ರಕಾರ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ.

ಪ್ರ:1ಃ ಈಗ ಓದಿ ಹೇಳಿದ ಆಪಾದನೆ ತಿಳಿಯಿತೇ?

ಉಃ ತಿಳಿಯಿತು

ಪ್ರ:2ಃ ತಪ್ಪು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆ ಆಗಬೇಕಾ?

ಉಃ ತಪ್ಪು ಮಾಡಿಲ್ಲ, ವಿಚಾರಣೆ ಆಗಬೇಕು

ಈ ಮೇಲ್ಕಂಡ ಆಪಾದನೆಯನ್ನು ನಾನೇ ಸ್ವತಃ ಆರೋಪಿಗೆ ಓದಿ ಹೇಳಿ, ಅವರು ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು, ಮೇಲೆ ಹೇಳಿರುವುದು ಸತ್ಯ ಹಾಗೂ ಸರಿಯಾಗಿದೆ ಎಂದು ದೃಢೀಕರಿಸುತ್ತೇನೆ.

ದಿನಾಂಕಃ 22ನೇ ದಿವಸ, ಜನವರಿ ಮಾಹೆ, 2020.

22.1.2020

(ಕಂಚಿ ಮಾಯಣ್ಣ ಗೌತಮ್)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರದನ್ಯಾಧಂ;ಕೊಪ್ಪ.